# ಪ್ರತಿ ಪಾತ್ರವೂ ಹೊಸ ಪಾಠದಂತೆ

ನಟನೆ ಹಾದಿ ತುಳಿದದ್ದು ಅನಿರೀಕ್ಷಿತವಾದರೂ ಇಲ್ಲೇ ಹೆಜ್ಜೆ ಗುರುತೊಂದನ್ನು ಮೂಡಿಸಬೇಕು ಎನ್ನುವಾಸೆ ಕೌಸ್ತುಭಮಣಿ ಅವರದ್ದು. 'ನನ್ನರಸಿ ರಾಧೆ' ಧಾರಾವಾಹಿ ನಂತರ 'ರಾಮಾಚಾರಿ 2.0', '45' ಸಿನಿಮಾಗಳ ಮೂಲಕ ಬೆಳ್ಳಿತೆರೆಗೆ ಬಂದಿರುವ ಅವರಲ್ಲಿ ಸಿನಿಮಾ ಲೋಕದ ಬಗ್ಗೆ ತೀರದ ಕುತೂಹಲ



■ ಸುಮಲತಾ ಎನ್.

'ಮಗುವೊಂದು ಕುತೂಹಲದಿಂದ ಎಲ್ಲವನ್ನೂ ಕಣ್ಣರಳಿಸಿಕೊಂಡು ನೋಡುತ್ತದಲ್ಲ, ಥೇಟ್ ಹಾಗೇ ನಾನು... ಸಿನಿಮಾಲೋಕ ನಂಗೆ ತುಂಬಾ ಹೊಸದು. ಇದು ಬೇರೆಯದೇ ರಂಗಿನ ಪ್ರಪಂಚ. ಇಲ್ಲಿ ಪ್ರತಿಯೊಂದೂ ಆಸಕ್ತಿ ಹುಟ್ಟಿಸುತ್ತಿದೆ, ನೋಡಲು ಹೊಸಹೊಸತು ಸಿಗುತ್ತಿದೆ, ದೊಡ್ಡ ದೊಡ್ಡ ಕಲಾವಿದರ ಪರಿಚಯವಾಗುತ್ತಿದೆ, ಕಲಿಯಬೇಕಾದ್ದು ಸಾಕಷ್ಟಿದೆ...'

ಮಾತಿನ ಜೊತೆ ನಗುವನ್ನೂ ಬೆರೆಸಿ, ಕನ್ನಡ ಚಿತ್ರರಂಗದಲ್ಲಿನ ತಮ್ಮ ಮೊದಲ ಹೆಜ್ಜೆಯ ಕುರಿತು ಉತ್ಸಾಹದಿಂದ ಮಾತನಾಡಿದರು ನಟಿ ಕೌಸ್ತುಭಮಣಿ.

'ನನ್ನರಸಿ ರಾಧೆ' ಧಾರಾವಾಹಿಯಲ್ಲಿ ಇಂಚರಾ ಪಾತ್ರಕ್ಕೆಂದು ಬಣ್ಣ ಹಚ್ಚಿದ ಕೌಸ್ತುಭಮಣಿ, ಇದೀಗ ಅರ್ಜುನ್ ಜನ್ಯ ಚೊಚ್ಚಿಲ ನಿರ್ದೇಶನದ, ನಟ ಶಿವರಾಜ್ ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ಅಭಿನಯದ ಸಿನಿಮಾಗೆ ನಾಯಕ ನಟಿಯಾಗಿ ಆಯ್ಕೆಯಾಗಿದ್ದಾರೆ. ಅವರ ನಟನೆಯ 'ರಾಮಾಚಾರಿ 2.0' ಕೂಡ ಬಿಡುಗಡೆಯಾಗಿದ್ದು, ಈ ಎರಡು ಚಿತ್ರಗಳ ಹಾದಿ ಅವರಿಗೆ ಹೊಸಹೊಸ ಅನುಭವ ನೀಡುತ್ತಿರುವುದಾಗಿ ಹೇಳುತ್ತಾರೆ.

ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಕೌಸ್ತುಭ ಅವರು ಓದಿದ್ದು ಎಂಬಿಎ ಫೈನಾನ್ಸ್. ಒಂದೂವರೆ ವರ್ಷ ಎಂಎನ್‌ಸಿಯೊಂದರಲ್ಲಿ ಕೆಲಸ ಮಾಡಿದ ಅವರಲ್ಲಿ ಲೆಕ್ಕಾಚಾರ ಬಿಟ್ಟು ಬೇರೆ ಆಲೋಚನೆಗಳೂ ಇರಲಿಲ್ಲ. ಆದರೆ ಸೌಂದರ್ಯ ಸ್ಪರ್ಧೆಯೊಂದರಲ್ಲಿ ಭಾಗವಹಿಸಿದ್ದು, ಅವರಿಗೆ ಹೊಸ ಅವಕಾಶದ ಬಾಗಿಲು ತೆರೆದಿತ್ತು.

''ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ ನಂತರ 'ನನ್ನರಸಿ ರಾಧೆ' ಧಾರಾವಾಹಿ ಆಡಿಷನ್‌ಗೆ ಕರೆ ಬಂತು. ಒಂದು ಪ್ರಯತ್ನ ಮಾಡಿಬಿಡೋಣ ಎಂದು ಹೋದೆ. ಆಶ್ಚರ್ಯವೆಂಬಂತೆ ನಾನು ಆಯ್ಕೆಯಾಗಿದ್ದೆ. ಈ ಧಾರಾವಾಹಿ ಮುಗಿಯುವ ಮುಂಚೆಯೇ, ಝೀ ತೆಲುಗು ಚಾನಲ್‌ನಲ್ಲಿ 'ಕೋಡಲ್ಲು ಮೀಕು ಜೋಹರ್ಲು' ಧಾರಾವಾಹಿಯಲ್ಲಿ ನಟಿಸಿದೆ. ನಾನು ನಟನೆಗೆ ಬಂದಿದ್ದು ತುಂಬಾ ಅನಿರೀಕ್ಷಿತ. ಈ ಬಗ್ಗೆ ಒಂದು ಸಣ್ಣ ಪ್ರಯತ್ನವನ್ನೂ ಮಾಡಿದವಳಲ್ಲ ನಾನು. ನನ್ನ ಓದು, ಕೆಲಸ ಬೇರೆ ಕ್ಷೇತ್ರದ್ದು. ಅಕೌಂಟ್ಸ್, ಫೈನಾನ್ಸ್ ಎಂದು ಕಂಪ್ಯೂಟರ್ ಮುಂದೆ ಕೂತಿರುತ್ತಿದ್ದವಳ ಎದುರು ಸಡನ್ನಾಗಿ ಈ ಬಣ್ಣದ ಲೋಕ ತೆರೆದುಕೊಂಡಿತು'' ಎಂದು ನಗುತ್ತಾರೆ.

ನಟನೆಯ ಮೂಲ ಪಾಠಗಳನ್ನು ಧಾರಾವಾಹಿ ತಮಗೆ ತಿದ್ದಿ ಕಲಿಸಿತು ಎನ್ನುತ್ತಾರೆ ಕೌಸ್ತುಭ. 'ನಟನೆ ಏನೆಂದು ಗೊತ್ತಿಲ್ಲದೇ ಇಲ್ಲಿಗೆ ಬಂದಾಗಿತ್ತು. ಕ್ಯಾಮೆರಾ, ರೈಟ್ ಬ್ಯಾಲೆನ್ಸ್, ಲೆಫ್ಟ್ ಬ್ಯಾಲೆನ್ಸ್, ಸಜೆಷನ್ಸ್, ಕ್ಲೋಸ್ ಅಪ್, ವೈಡ್ ಶಾಟ್ ಎಂದು ಕ್ಯಾಮೆರಾಮೆನ್ ಹೇಳುತ್ತಿದ್ದರೆ, ನನಗೆ ಏನೂ ಅರ್ಥವಾಗದೆ ಭಯವಾಗುತ್ತಿತ್ತು. ಆದರೆ ನನಗೆ ಧಾರಾವಾಹಿ ತಂಡ ಎಲ್ಲವನ್ನೂ ತಾಳ್ಮೆಯಿಂದ